# ವಿಸ್ತರಿಸುತ್ತಿರುವ ಎನ್‌ಡಿಎ

ಅರುಣ್ ಜೇಟ್ಲಿ
(ವಿರೋಧ ಪಕ್ಷದ ನಾಯಕರು, ರಾಜ್ಯ ಸಭಾ)

ಭಾಜಪದೊಂದಿಗೆ ಸಖ್ಯ ಬೆಳೆಸಲು ಮತ್ತು ಎನ್‌ಡಿಎ ಒಕ್ಕೂಟದಲ್ಲಿ ಸೇರಿಕೊಳ್ಳಲು ಶ್ರೀ ರಾಮ್ ವಿಲಾಸ್ ಪಾಸ್ವಾನ್ ಅವರ ಲೋಕ್ ಜನಶಕ್ತಿ ಪಕ್ಷ ನಿರ್ಧರಿಸಿದೆ. ಜೊತೆಗೆ, ಹಲವಾರು ರಾಜಕೀಯ ನಾಯಕರು, ಖ್ಯಾತ ನಾಗರಿಕರು ಹಾಗೂ ಹಲವಾರು ರಾಜಕೀಯ ಸಮೂಹಗಳು ಬಂದು ಸೇರುವ ಮೂಲಕ ಅಥವಾ ಎನ್‌ಡಿಎ ಅಂಗಪಕ್ಷವಾಗುವ ಮೂಲಕ ಭಾಜಪವನ್ನು ಬೆಂಬಲಿಸುತ್ತಿವೆ. ಭಾಜಪ/ಎನ್‌ಡಿಎ ಹಾಗೂ ನರೇಂದ್ರ ಮೋದಿ ಅವರಿಗೆ ಹೆಚ್ಚುತ್ತಿರುವ ಸಮರ್ಥನೆ ವೃದ್ಧಿಸುತ್ತಿರುವುದು ಸ್ಪಷ್ಟವಾಗಿ ಗೋಚರಿಸುತ್ತಿದೆ.

ಕೆಲವು ರಾಜಕೀಯ ಸಮೂಹಗಳು ತಮ್ಮನ್ನು ಎನ್‌ಡಿಎದೊಂದಿಗೆ ಗುರುತಿಸಿಕೊಂಡರೆ, ಅವರ ಪ್ರಭಾವದ ವ್ಯಾಪ್ತಿ ಆಯಾ ರಾಜ್ಯಕ್ಕೆ ಸೀಮಿತವಾಗಬಹುದು. ಆದರೂ, ಅವರ ಸೇರ್ಪಡೆ ರಾಜಕೀಯ ಮಹತ್ವವನ್ನು ಸೂಚಿಸುತ್ತದೆ. ನರೇಂದ್ರ ಮೋದಿ ಅವರನ್ನು ಪ್ರಧಾನ ಮಂತ್ರಿ ಅಭ್ಯರ್ಥಿಯಾಗಿ ಭಾಜಪ ಘೋಷಿಸಿದ ನಂತರ, ಪಕ್ಷಕ್ಕೆ ಮಿತ್ರ ಪಕ್ಷಗಳು ದೊರೆಯುವುದು ಕಷ್ಟಸಾಧ್ಯವೆಂದು ನಮ್ಮ ಮಿತ್ರರಾದ ಮಾಧ್ಯಮಗಳು ಮತ್ತು ರಾಜಕೀಯ ವಿಶ್ಲೇಷಕರು ಅಂದಾಜಿಸಿದ್ದರು. ಮುಂದಿನ ದಿವಸಗಳಲ್ಲಿ ಪಕ್ಷ ರಾಜಕೀಯವಾಗಿ ಪ್ರತ್ಯೇಕ ಗುಂಪಾಗಿ ಉಳಿಯಲಿದೆ ಎಂಬ ಅನಿಸಿಕೆ ಅವರದ್ದಾಗಿತ್ತು. ಆದರೆ ಈಗ ಪಕ್ಷಕ್ಕೆ ದೊರೆಯುತ್ತಿರುವ ಬೆಂಬಲ ವೃದ್ಧಿಸುತ್ತಿರುವಾಗ, ಅದರ ಪ್ರತ್ಯೇಕತೆಯ ವೈಭವ ಒಪ್ಪುವಂತಹದು. ಆದರೂ, ಹೀಗಾಗಲು ಸಾಧ್ಯವಿದೆಯೆ. ದುರ್ಬಲ ಬಿಜೆಪಿಗಿಂತ ಬಲಿಷ್ಠ ಭಾಜಪಗೆ ಹೆಚ್ಚಿನ ಸ್ನೇಹಿತರನ್ನು ಆಕರ್ಷಿಸುವ ಸಾಮರ್ಥ್ಯವಿದೆ. ಭಾಜಪ ಸಾರ್ವಜನಿಕ ಸಭೆಗಳಲ್ಲಿ ಕಾಣುತ್ತಿರುವ ಬೆಂಬಲದ ಸೆಳೆ ಚುನಾವಣೆಯಲ್ಲಿ ಉತ್ತಮ ಪ್ರತಿಫಲ ನೀಡಬಹುದು. ರಾಜಕೀಯ ಅಲೆ ಭಾಜಪ ದಿಕ್ಕಿನಲ್ಲಿ ಬೀಸುತ್ತಿದೆ ಎಂಬ ಸಂದೇಶ ರವಾನೆಯಾಗಿದೆ. ಇಂದು, ಗುಜರಾತ್ ಮತ್ತು ಕರ್ನಾಟಕ ರಾಜ್ಯಗಳಲ್ಲಿ ಭಾಜಪ ತ್ಯಜಿಸಿದ ನಾಯಕರು ಮರಳುತ್ತಿದ್ದಾರೆ. ಇದರಿಂದ ಪಕ್ಷದ ಬಲ ಹೆಚ್ಚಿದೆ. ಪಂಜಾಬ್, ಹರಿಯಾಣ, ಮಹಾರಾಷ್ಟ್ರ, ಬಿಹಾರ್ ಮತ್ತು ತಮಿಳುನಾಡಿನಲ್ಲಿ ಪ್ರಬಲ ಮಿತ್ರಪಕ್ಷಗಳು ಬೆಂಬಲ ಸೂಚಿಸಿವೆ. ಹಲವು ರಾಜ್ಯಗಳಲ್ಲಿ ಚುನಾವಣಾ ಪೂರ್ವ ಹೊಂದಾಣಿಕೆಗಳು ಅಥವಾ ರಾಜಕೀಯ ಹೊಂದಾಣಿಕೆಗಳು ಸಂಭವನೀಯ ಎನಿಸುತ್ತಿದೆ ಮತ್ತು ಸಾಧ್ಯವಾಗಲಿದೆ.

ಬಲಿಷ್ಠ ಭಾಜಪದಿಂದ ಬಲಿಷ್ಠ ಎನ್‌ಡಿಎ ಸಾಧ್ಯವೆಂದು ನಾನು ಸದಾ ನಂಬಿದ್ದೆ. ಎನ್‌ಡಿಎ ಬಲವರ್ಧನೆಗೆ ಅಟಲ್ ಅವರ ಪುಸ್ತಕ ಸೂಕ್ತ ಮಾರ್ಗೋಪಾಯಗಳನ್ನು ಸೂಚಿಸುತ್ತದೆ. ೧೯೯೬ರಲ್ಲಿ ಮೂರು ಪಕ್ಷಗಳ ಎನ್‌ಡಿಎ, ೧೯೯೮ರಲ್ಲಿ 24 ಪಕ್ಷಗಳ ಎನ್‌ಡಿಎ ಆಗಿ ಬೆಳೆದಿತ್ತು. ಪ್ರಾದೇಶಿಕ ಪಕ್ಷಗಳನ್ನು ಆಕರ್ಷಿಸಲು, ಭಾರತದ ಒಕ್ಕೂಟ ವ್ಯವಸ್ಥೆ ಹಾಗೂ ವೈವಿಧ್ಯಮಯ ಗುಣಲಕ್ಷಣವನ್ನು ಸ್ವೀಕರಿಸುವುದು ಮತ್ತು ಸನ್ಮಾನಿಸುವುದು ಮುಖ್ಯ. ಜನಪ್ರಿಯ ಬೆಂಬಲ, ಹೆಚ್ಚಿನ ಸಂಖ್ಯೆಯಲ್ಲಿ

ಮಿತ್ರಪಕ್ಷಗಳ ಬೆಂಬಲ ಮತ್ತು ಒಕ್ಕೂಟದ ವಿಸ್ತಾರವೇ ಮಹತ್ವ ಪಡೆದಿವೆ. ಇವೆಲ್ಲವೂ ಹೊಸ ಬದಲಾವಣೆಯ ಸಂಕೇತಗಳಾಗಿವೆ.